ಪಿ.ಡಬ್ಲ್ಯೂ- 1

**ದಿನಾಂಕ: 19-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಲ್ ಎಲ್ ವಕೀಲರಿಂದ**

ದಾವ ಸ್ವತ್ತಿನ ಪಕ್ಕಾ ಪೋಡಿ ದುರಸ್ತು ಆಗಿರುತ್ತದೆ ಎಂದರೆ ಸರಿ. ಸದರಿ ಪಕ್ಕಾ ಪೋಡಿ ದುರಸ್ತಿ ಆಗಿರುವ ಬಗ್ಗೆ ಯಾವುದಾದರೂ ದಾಖಾಲತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣಾ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಮ್ಮ ಮುಖ್ಯ ವಿಚಾರಣಾ ಪತ್ರದಲ್ಲಿ ದಾವ ಸ್ವತ್ತು ದುರಸ್ತು ಮಾಡಲು ಅರ್ಜಿ ಸಲ್ಲಿಸಿರುತ್ತೇವೆ ಎಂದು ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸುಮಾರು ಎಷ್ಟು ವರ್ಷಗಳ ಹಿಂದೆ ಅರ್ಜಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಮೂಲತಃ ದಾವ ಸ್ವತ್ತು ಯಾರಿಗೆ ಮಂಜೂರಾಗಿತ್ತು ಎಂದರೆ ಸಾಕ್ಷಿ ಸಿದ್ದಲಿಂಗಪ್ಪ ಬಿನ್ ಮಲ್ಲೇಗೌಡರವರಿಗೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸಿದ್ದಲಿಂಗಪ್ಪ ನವರಿಗೆ ಮಂಜೂರಾದ ಸಮಯದಲ್ಲಿ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಚಂದ್ರೋಜಿ ರಾವ್, ಪಶ್ಚಿಮಕ್ಕೆ ಕೃಷ್ಣೋಜಿರಾವ್, ಉತ್ತರಕ್ಕೆ ತಾಶಿ, ದಕ್ಷಿಣಕ್ಕೆ ಕೆ.ಟಿ ಭಾಗ್ಯಮ್ಮ ಇರುತ್ತದೆ. ಹನುಮಂತಪ್ಪನವರು ಸಿದ್ದಲಿಂಗಪ್ಪನವರಿಂದ ಕೊಂಡುಕೊಂಡ ಸಮಯದಲ್ಲಿ ದಾವ ಸ್ವತ್ತಿನ ಚಕ್ಕುಬಂದಿಯು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

ಸಿದ್ದಲಿಂಗಪ್ಪನವರಿಂದ ಹನುಮಂತಪ್ಪನವರು ಕೊಂಡುಕೊಂಡ ಕ್ರಯಪತ್ರದಲ್ಲಿರುವ ಚಕ್ಕುಬಂದಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಅದರಲ್ಲಿರುವ ವಿಚಾರವನ್ನು ನಾನು ತಿಳಿದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವ ಸರ್ವೆ ನಂ.26 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೆ ನಂ.26 ರಲ್ಲಿ ಸರ್ಕಾರದ ಕೆರೆ ಮುಗುಳಿಕಟ್ಟೆ ಎಂದು ಸರ್ವೆ ನಂ.26 ರಲ್ಲಿ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ದಿ: 15-01-2001 ರಂದು ಲಕ್ಷ್ಮೀದೇವಮ್ಮನವರು ಮಗಳಾದ ಲತ ಮತ್ತು ಪ್ರಸನ್ನಕುಮಾರ್ ರವರೊಂದಿಗೆ ಸೇರಿ ನಿಮ್ಮ ಪತಿಯಾದ ರುದ್ರನಾಯ್ಕರವರಿಗೆ ದಾವ ಸ್ವತ್ತನ್ನು

ಮಾರಾಟ ಮಾಡಿರುವ ಕ್ರಯಪತ್ರದಲ್ಲಿರುವ ಚಕ್ಕುಬಂದಿಯನ್ನು ನೀವೇನಾದರೂ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಾವು ಸಲ್ಲಿಸಿರುವ ದಾವ ಸ್ವತ್ತಿನ ಚಕ್ಕುಬಂದಿಯು ಪೂರ್ವಕ್ಕೆ ಚಂದ್ರೋಜಿ ರಾವ್, ಪಶ್ಚಿಮಕ್ಕೆ ಕೃಷ್ಣೋಜಿರಾವ್, ಉತ್ತರಕ್ಕೆ ತಾಶಿ, ದಕ್ಷಿಣಕ್ಕೆ ಕೆ.ಟಿ ಭಾಗ್ಯಮ್ಮ ಇರುತ್ತದೆ. ನೀವು ದಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ, ಯಾವುದೇ ಭತ್ತದ ಬೆಳೆಯನ್ನು ಬೆಳೆದಿರುವುದಿಲ್ಲ ಎಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ದಾವ ಸ್ವತ್ತು ಪಕ್ಕಾ ಪೋಡಿ ಆಗದ ಕಾರಣ ನಿಮ್ಮ ದಾವ ಸ್ವತ್ತು ಸರ್ವೆ ನಂ.26 ರಲ್ಲಿ ಎಲ್ಲಿ ಬರುತ್ತದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನೀವು ಯಾವುದೇ ಬೆಳೆ ಪರಿಹಾರವನ್ನು ಪಡೆದುಕೊಂಡಿಲ್ಲ, ಸದರಿ ದಾವೆಯನ್ನು ಸಲ್ಲಿಸುವುದಕ್ಕಾಗಿ ದಾಖಲಾತಿಯನ್ನು ಸೃಷ್ಟಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ.

ನೀವು ಪರಿಹಾರ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸಿರುವ ಚಕ್ಕುಬಂದಿಯನ್ನು ತಿಳಿಸಲು ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡಿಸಿರುತ್ತೇನೆಂದು ನುಡಿದಿರುತ್ತಾರೆ. ನೀವು ಕೆನರಾ ಬ್ಯಾಂಕಿನಲ್ಲಿ ಸಾಲವನ್ನು ಪಡೆಯಲು ದಾವ ಸ್ವತ್ತಿನ ಚಕ್ಕುಬಂದಿ ನಮೂದು ಮಾಡಿರುವ ಬಗ್ಗೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆಂದು ನುಡಿದಿರುತ್ತಾರೆ. ದಾವ ಸ್ವತ್ತಿನಲ್ಲಿ ನೀವು ಯಾವುದೇ ಅಡಿಕೆ ಗಿಡಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ಯಾವ ಪರಿಹಾರ ಕೋರಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಪ್ರತಿವಾದಿಯಾದ ಚಂದ್ರೋಜಿ ರಾವ್ ರವರು ತೊಂದರೆ ಮಾಡಿದ ಕಾರಣಕ್ಕೆ ದಾವೆ ಹೂಡಿರುತ್ತೇವೆ ಎಂದು ನುಡಿದಿರುತ್ತಾರೆ. ಚಂದ್ರೋಜಿ ರಾವ್ ರವರು ನಿಮಗೆ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 23 ರವರೆಗಿನ ದಾಖಲಾತಿಗಳನ್ನು ಸದರಿ ದಾವೆಗೋಸ್ಕರ ಸೃಷ್ಠಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-24 ರಿಂದ 28 ಛಾಯಚಿತ್ರವನ್ನು ಯಾರು ತೆಗೆದಿರುತ್ತಾರೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ

ಎಂದು ನುಡಿದಿರುತ್ತಾರೆ. ಸದರಿ ಛಾಯಚಿತ್ರಗಳನ್ನು ಸಹ ಈ ದಾವೆಗೋಸ್ಕರ ಸೃಷ್ಠಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನೀವು ದಾವ ಸ್ವತ್ತಿನಲ್ಲಿ ನಮೂದಿಸಿರುವ ಚಕ್ಕುಬಂದಿಗೂ ಹಾಗೂ ನಿಪಿ-19 ಮತ್ತು 20 ದಾಖಲಾತಿಯಲ್ಲಿರುವ ಚಕ್ಕುಬಂದಿಗೂ ಹೊಂದಾಣಿಕೆ ಇಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಈ ದಾವೆಯನ್ನು ಹೂಡುವ ಸಲುವಾಗಿ ದಾವ ಸ್ವತ್ತಿನಲಿಲರುವ ಚಕ್ಕುಬಂದಿಯನ್ನು ಸೃಷ್ಠಿ ಮಾಡಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆಯನ್ನು ವಿನಾಕಾರಣ ಹೂಡಿರುತ್ತೀರಾ ಎಂದರೆ ಸರಿಯಲ್ಲ. ಇಂದಿನವರೆಗೂ ಸಹ ದಾವ ಆಸ್ತಿಯ ಯಾವುದೇ ಪಕ್ಕಾ ಪೋಡಿ ದುರಸ್ತಿ ಆಗಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**